# ಆಧ್ಯಾತ್ಮಿಕ ಅನುಭವ



ಕಿವಿಯಲ್ಲಿ ಕೇಳುವುದಕ್ಕಿಂತ ಕಣ್ಣಿನಿಂದ ನೋಡುವುದು ಅತ್ಯಂತ ಮೇಲು. ಕಣ್ಣಿನಿಂದ ನೋಡಿದ ನಂತರ ಸಕಲ ಸಂದೇಹಗಳೂ ನಿವೃತ್ತಿಯಾಗಿಬಿಡುತ್ತವೆ. ಶಾಸ್ತ್ರಗಳಿಂದಲೇನೋ ಭಗವಂತನ ಸಂಬಂಧವಾಗಿ ಅನೇಕ ವಿಷಯಗಳನ್ನು ತಿಳಿದುಕೊಳ್ಳಬಹುದು; ಆದರೆ ಆತನ ಸಾಕ್ಷಾತ್ಕಾರ ಮಾಡಿಕೊಳ್ಳದೆ ಇದ್ದರೆ, ಆತನ ಪಾದಪದ್ಮಗಳಲ್ಲಿ ಭಕ್ತಿ ಉಂಟುಮಾಡಿಕೊಳ್ಳದೆ ಇದ್ದರೆ, ಚಿತ್ತಶುದ್ಧಿ ಉಂಟುಮಾಡಿಕೊಳ್ಳದೆ ಇದ್ದರೆ ಎಲ್ಲವೂ ವ್ಯರ್ಥ. ಪಂಚಾಂಗದಲ್ಲಿ ಬರೆದಿರುತ್ತದೆ, ಇಪ್ಪತ್ತು ಕೊಳಗ ಮಳೆ ಬೀಳುವುದೆಂದು. ಆದರೆ ಆದನ್ನು ಹಿಂಡಿದರೆ ಒಂದು ತೊಟ್ಟು ನೀರೂ ಕೆಳಕ್ಕೆ ಬೀಳದು.

ಶಾಸ್ತ್ರಗಳ ಸಂಬಂಧವಾಗಿ ವಿಚಾರ ಎಲ್ಲಿಯವರೆಗೆ? ಭಗವಂತನ ಸಾಕ್ಷಾತ್ಕಾರ ಆಗದವರೆಗೆ. ದುಂಬಿ ಎಲ್ಲಿಯವರೆಗೆ ಝೇಂಕರಿಸುತ್ತದೆ? ಹೂವಿನ ಮೇಲೆ ಕೂಡದವರೆಗೆ. ಹೂವಿನ ಮೇಲೆ ಕುಳಿತು ಮಧುಪಾನ ಮಾಡಲು ಆರಂಭಿಸಿದೊಡನೆಯೇ ಶಬ್ದ ಎಲ್ಲ ನಿಂತುಹೋಗಿಬಿಡುತ್ತದೆ.

ಜ್ಞಾನಿ ‘ನೇತಿ, ನೇತಿ’, ‘ಇದಲ್ಲ, ಇದಲ್ಲ’ ಎಂದು ವಿಚಾರ ಮಾಡಿ ಕೊನೆಗೆ ನಿತ್ಯ ಅಖಂಡ ಸಚ್ಚಿದಾನಂದನನ್ನು ಮುಟ್ಟಿಬಿಡುತ್ತಾನೆ. ಆತ ಈ ರೀತಿ ವಿಚಾರ ಮಾಡುತ್ತಾನೆ: ‘ಬ್ರಹ್ಮ ಜೀವವಲ್ಲ, ಜಗತ್ತಲ್ಲ, ಚತುರ್ವಿಂಶತಿ ತತ್ತ್ವವಲ್ಲ’. ಈ ವಿಧವಾದ ವಿಚಾರದಿಂದ ಕೊನೆಗೆ ಸಚ್ಚಿದಾನಂದ ಸಾಕ್ಷಾತ್ಕಾರ ದೊರೆಯುತ್ತದೆ. ಆಗ ಆತನಿಗೇ ಅನುಭವವಾಗುತ್ತದೆ, ಆತನೇ ಇದೆಲ್ಲ ಆಗಿರುವ ಹಾಗೆ-ಜೀವ, ಜಗತ್ತು, ಚತುರ್ವಿಂಶತಿ ತತ್ತ್ವ ಎಲ್ಲ.

ಆನಂದದಲ್ಲಿ ಮೂರು ವಿಧ-ವಿಷಯಾನಂದ, ಭಜನಾನಂದ, ಬ್ರಹ್ಮಾನಂದ. ಯಾವುದರ ಕಡೆ ಜನ ಸರ್ವದಾ ನುಗ್ಗುತ್ತಿರುವರೊ, ಎಂದರೆ ಕಾಮಕಾಂಚನಗಳ ಆನಂದದ ಕಡೆ, ಅದಕ್ಕೆ ವಿಷಯಾನಂದ ಅಂತ ಹೆಸರು. ಭಗವಂತನ ನಾಮಗುಣ ಕೀರ್ತನೆಯಿಂದ ದೊರೆಯುವ ಆನಂದಕ್ಕೆ ಭಜನಾನಂದ ಅಂತ ಹೆಸರು. ಬ್ರಹ್ಮಾನಂದ ದೊರೆತ ನಂತರ ಹಿಂದಿನ ಕಾಲದ ಋಷಿಗಳು ಸಾಂಪ್ರದಾಯಿಕ ರೀತಿ-ನೀತಿಗಳ ಎಲ್ಲೆಯನ್ನು ದಾಟಿ ಹೋಗಿಬಿಡುತ್ತಿದ್ದರು.

ತೋಟಕ್ಕೆ ಬಂದುದು ಮಾವಿನ ಹಣ್ಣು ತಿನ್ನಲು. ತಿನ್ನು ಹಣ್ಣನ್ನು. ತೋಟದಲ್ಲಿ ಮರಗಳೆಷ್ಟಿವೆ, ಎಷ್ಟು ಸಾವಿರ ಕೊಂಬೆಗಳಿವೆ, ಎಷ್ಟು ಲಕ್ಷ ಎಲೆಗಳಿವೆ ಎಂಬೀ ಲೆಕ್ಕಾಚಾರದಿಂದ ನಮಗಾಗುವ ಪ್ರಯೋಜನವೇನು? ವೃಥಾ ತರ್ಕ, ವಿಚಾರ ಇವುಗಳಲ್ಲಿ ತೊಡಗಿದರೆ ವಸ್ತುಲಾಭ ದೊರಕದು.

ಸಮಾಧಿ ದೊರೆತನಂತರ ‘ವಿದ್ಯಾ ಅಹಂ’ ಅನ್ನು ಕೆಲಕೆಲವರು ಇಚ್ಛೆಪಟ್ಟು ಇಟ್ಟುಕೊಳ್ಳುತ್ತಾರೆ. ಆ ‘ಅಹಂ’ ಅವರಲ್ಲಿ ಯಾವ ಆಸಕ್ತಿಯನ್ನೂ ಬೆಳಸದು. ಅದು ನೀರಿನ ಮೇಲೆ ಎಳೆದ ಗೆರೆಯ ಹಾಗೆ.

ಬರೀ ಶುಷ್ಕಜ್ಞಾನವಿದೆಯಲ್ಲ, ಇದು ಸಾಮಾನ್ಯ ಆಕಾಶಬಾಣದ ಹಾಗೆ; ‘‘ಫುಸ್’’ ಅಂತ ಮೇಲಕ್ಕೆ ಹೋಗಿ ಕೆಲವು ಕಿಡಿಗಳನ್ನು ಒದರಿ ನಾಶವಾಗಿಬಿಡುತ್ತದೆ. ಆದರೆ ನಾರದ, ಶುಕದೇವ ಇವರೇ ಮೊದಲಾದವರ ಜ್ಞಾನ ಒಂದು ಒಳ್ಳೇ ಆಕಾಶಬಾಣ ಇದ್ದ ಹಾಗೆ. ಸ್ವಲ್ಪ ಹೊತ್ತು ವಿವಿಧ ಬಣ್ಣಗಳ ಕಿಡಿಗಳನ್ನು ಕಾರುತ್ತಿದ್ದು ತೆಪ್ಪಗಾಗುತ್ತದೆ; ಮತ್ತೆ ಹೊಸ ಕಿಡಿಗಳನ್ನು ಉದುರಿಸುತ್ತಿದ್ದು ಮತ್ತೆ ತೆಪ್ಪಗಾಗುತ್ತದೆ. ಈ ರೀತಿಯಾಗಿ ಅದು ಮಾಡುತ್ತಲೇ ಹೋಗುತ್ತಿರುತ್ತದೆ. ಆ ಋಷಿಗಳಿಗೆ ಭಗವಂತನಲ್ಲಿ ಪ್ರೇಮ ಉಂಟಾಗಿತ್ತು. ಪ್ರೇಮವಿದೆಯಲ್ಲ, ಅದು ಸಚ್ಚಿದಾನಂದನನ್ನು ಮುಟ್ಟಲು ಸಹಾಯಕವಾಗುವ ಹಗ್ಗ.

ಸಾಧನೆ ಮಾಡದೆ ಶಾಸ್ತ್ರಗಳ ಅರ್ಥವನ್ನು ಅರಿಯಲಾಗುವುದಿಲ್ಲ. ಬರಿದೆ ಭಂಗಿಸೊಪ್ಪು, ಭಂಗಿಸೊಪ್ಪು, ಅನ್ನುತ್ತಿದ್ದರೆ ಏನಾದೀತು? ಪಂಡಿತರು ಶ್ಲೋಕಗಳನ್ನು ನಿರರ್ಗಳವಾಗಿ ಹೇಳಿಬಿಡಬಲ್ಲರು — ಆದರೆ ಅದರಿಂದ ಏನು ದೊರೆಯುತ್ತದೆ? ಭಂಗಿಸೊಪ್ಪನ್ನು ಮೈಮೇಲೆ ಲೇಪ ಹಾಕಿಕೊಂಡರೂ ಏನೂ ಆಗದು — ಅರೆದು ಕುಡಿಯಬೇಕು. ಬರಿದೆ ಹೇಳುತ್ತಿದ್ದರೆ ಏನಾದೀತು, ‘ಹಾಲಿನಲ್ಲಿ ಬೆಣ್ಣೆ ಇದೆ’, ‘ಹಾಲಿನಲ್ಲಿ ಬೆಣ್ಣೆ ಇದೆ’, ಅಂತ? ಹಾಲಿಗೆ ಹೆಪ್ಪು ಹಾಕಿ, ಮೊಸರು ಮಾಡಿ ಕಡೆ. ಆಗ ತಾನೆ ಬೆಣ್ಣೆ ಸಿಕ್ಕಬೇಕಾದರೆ.

ಯಾವಾಗ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೊ, ಆಗ ವೇದ, ವೇದಾಂತ, ಪುರಾಣ, ತಂತ್ರ ಇವೆಲ್ಲಾ ಎಂದೋ ಕೆಳಗೆ ಬಿದ್ದುಕೊಂಡಿರುತ್ತವೆ! ಸಮಾಧಿಯಲ್ಲಿ ‘ಓಂ’ ಎಂದು ಉಚ್ಚರಿಸಲಾಗುವುದಿಲ್ಲ. ಏಕೆ ಹೀಗೆ? ಸಮಾಧಿಯಿಂದ ಬಹಳ ದೂರ ಕೆಳಕ್ಕೆ ಇಳಿದುಬಾರದವರೆಗೆ ‘ಓಂ’ ಅಂತ ಉಚ್ಚರಿಸಲು ಸಾಧ್ಯವಾಗುತ್ತಿಲ್ಲ.

ಪ್ರೀತಿ, ಈ ರಾಗಾಭಕ್ತಿ ಉಂಟಾಯಿತು ಎಂದರೆ, ಹೆಂಡತಿ, ಮಕ್ಕಳು, ಸ್ವಬಾಂಧವರು ಇವರ ಮೇಲೆ ಮನುಷ್ಯನಿಗಿರುವ ಮಾಯಾಪ್ರೇರಿತ ಆಕರ್ಷಣೆ ಇರದು. ಅವರ ಕಡೆಗೆ ಆತನಲ್ಲಿ ದಯೆ ಮಾತ್ರ ಉಳಿದಿರುತ್ತದೆ, ಈ ಜಗತ್ತು ವಿದೇಶವಾಗಿ ತೋರಿಬರುತ್ತದೆ. ಕೇವಲ ಕರ್ಮಭೂಮಿಯಾಗಿ ಕಂಡುಬರುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ